**ANDOLANA**

Date: Nov 06, 2015 — Page: 2

Edition: Mysore — Language: Kannada

---

# ಉದ್ಯಮಿಗಳಿಗೆ ಸಾಮಾಜಿಕ ಕಳಕಳಿ ಹೆಚ್ಚಲಿ

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸಮ್ಮೇಳನದಲ್ಲಿ ಮುತ್ತುರಾಮನ್

ಮೈಸೂರು,ನ.೫–ಇತರೆ ದೇಶಗಳಿಗೆ ಹೋಲಿಸಿದರೆ ಭಾರತದ ಉದ್ಯಮಿಗಳಿಗೆ ಸಾಮಾಜಿಕ ಕಳಕಳಿ ಇದೆ. ಈ ಸಾಮಾಜಿಕ ಕಳಕಳಿ ಸಮಾಜದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಮತ್ತಷ್ಟು ಹೆಚ್ಚಾಗಬೇಕು ಎಂದು ಟಾಟಾ ಸ್ಟೀಲ್ ಮಾಜಿ ಅಧ್ಯಕ್ಷ ಬಿ.ಮುತ್ತುರಾಮನ್ ಹೇಳಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್‌ನ ಕಾಲೇಜಿನಲ್ಲಿ ಗುರುವಾರ 'ಉದ್ಯಮಗಳಿಂದ ಸಾಮಾಜಿಕ ಕಳಕಳಿ' ಎಂಬ ವಿಷಯದ ಕುರಿತು ಏರ್ಪಡಿಸಿದ್ದ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಭಿವೃದ್ಧಿ ಹೊಂದುತ್ತಿರುವ ದೇಶದ ಸಾಲಿಗೆ ಭಾರತ ಸೇರಿದೆ. ಭಾರತದಲ್ಲಿ ಅನೇಕ ಸಮಸ್ಯೆಗಳಿದ್ದು, ಈ ಸಮಸ್ಯೆಗಳು ಅಭಿವೃದ್ಧಿಗೆ ತೊಡಕುಂಟುಮಾಡುತ್ತಿವೆ. ಇತರೆ ದೇಶಗಳಿಗೆ ಹೋಲಿಸಿಕೊಂಡರೆ ಭಾರತದ ಉದ್ಯಮಿಗಳಿಗೆ ಸಾಮಾಜಿಕ ಕಳಕಳಿ ಇದ್ದು, ಈ ಸಾಮಾಜಿಕ ಕಳಕಳಿ ಮತ್ತಷ್ಟು ಹೆಚ್ಚಾಗಬೇಕು. ಈ ಕುರಿತು ಉದ್ಯಮಿಗಳಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.



ನಗರದ ಎಸ್‌ಡಿಎಂ ಐಎಂಡಿ ಏರ್ಪಡಿಸಿದ್ದ ಎರಡು ದಿನಗಳ ಸಮ್ಮೇಳನದಲ್ಲಿ ಟಾಟಾ ಸ್ಟೀಲ್‌ನ ಮಾಜಿ ಅಧ್ಯಕ್ಷ ಬಿ.ಮುತ್ತುರಾಮನ್ ಮಾತನಾಡಿದರು. ಚಿತ್ರದಲ್ಲಿ ಎಟಿ&ಎಸ್ ಕಂಪನಿಯ ಮುಖ್ಯಸ್ಥ ರಾಬರ್ಟ್, ಎಸ್‌ಡಿಎಂಐಎಂಡಿ ಕಾಲೇಜಿನ ಅಧ್ಯಕ್ಷ ಡಾ.ಎನ್.ಆರ್.ಪರುಶುರಾಮ್ ಇನ್ನಿತರರು ಚಿತ್ರದಲ್ಲಿದ್ದಾರೆ

ಬಹುತೇಕ ಉದ್ಯಮಿಗಳು ಸಮಾಜದ ಹಿತವನ್ನು ಬದಿಗೊತ್ತಿ ಲಾಭ ಗಳಿಕೆಗೆ ಹೆಚ್ಚು ಮಹತ್ವ ನೀಡುತ್ತಾರೆ.

ಇದು ಅಕ್ಷರಶಃ ತಪ್ಪು ಎಂದ ಅವರು, ಜನರ ವಿಶ್ವಾಸ ಗಳಿಸಿದರೆ ಮಾತ್ರ ಉದ್ಯಮ, ಉದ್ಯಮಿಗಳು ಬೆಳೆಯುತ್ತಾರೆ. ಹೀಗಾಗಿ ಉದ್ಯಮಿಗಳು ತಾವು ಗಳಿಸಿದ ಲಾಭದಲ್ಲಿ ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಪ್ರಯತ್ನಪಡಬೇಕು ಎಂದು ಅವರು ತಿಳಿಸಿದರು.

ಎಟಿ ಅಂಡ್ ಎಸ್ ಕಂಪನಿಯ ಆಡಳಿತ ನಿರ್ದೇಶಕ ಮತ್ತು ಸಿಒಒ ರಾಬರ್ಟ್, ಎಸ್‌ಡಿಎಂಐಎಂಡಿ ಸಂಸ್ಥೆಯ ಡಾ.ಎನ್.ಆರ್. ಪರಶುರಾಮ್, ಪ್ರಾಧ್ಯಾಪಕರಾದ ಡಾ.ಎಂ.ಆರ್.ಸುರೇಶ್, ಪ್ರೊ. ಎನ್.ಆರ್. ಗೋವಿಂದ ಶರ್ಮ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.